ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು

**ಎಸ್.ಸಿ. :15/2021**

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಸುಮಾ | ಪ್ರಮಾಣ ಮಾಡಿದ ದಿನಾಂಕ |
| ಗಂಡನ ಹೆಸರು | : | ಮಂಜುನಾಥ | **30.01.2024** |
| ವಯಸ್ಸು | : | 37 ವರ್ಷ | |
| ವೃತ್ತಿ | : | ಗೃಹಿಣಿ | ಪಿ.ಡಬ್ಲೂ಼ 12 |
| ವಾಸಸ್ಥಳ | : | ಮೈಸೂರು | ಸಿ.ಡಬ್ಲೂ಼ 10 |

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ**

ನ್ಯಾಯಾಲಯದ ಮುಂದಿರುವ ಆರೋಪಿ ನನ್ನ ಗಂಡ. ಪ್ರಾಸಾ 1 ಮತ್ತು 2 ರವರು ಗೊತ್ತು. ಪ್ರಾಸಾ 1 ದೂರದ ಸಂಬಂಧಿ ಹಾಗಾಗಿ ಪರಿಚಯ. ನನ್ನೊಂದಿಗೆ ಪ್ರಾಸಾ 1 ರವರ ಯಾವುದೇ ಹಣಕಾಸಿನ ವ್ಯವಹಾರ ಇಲ್ಲ ಹಾಗೂ ಮೊದಲು ಇರಲಿಲ್ಲ. ನನ್ನ ಹಾಗೂ ಪ್ರಾಸಾ 1 ರವರ ನಡುವೆ ಸಂಬಂಧಿ ಎನ್ನುವ ಕಾರಣಕ್ಕಾಗಲೀ ಅಥವಾ ವಿಶ್ವಾಸದಿಂದಾಗಲೀ ದೂರವಾಣಿ ಮೂಲಕ ಮಾತನಾಡುವ ಅಥವಾ ಬೇಟಿಯಾಗುವ ಪ್ರಸಂಗಗಳು ಇಲ್ಲ.

2. ದಿಃ19.06.2020 ಆರೋಪಿ ಠಾಣೆಯಲ್ಲಿ ಇದ್ದಾರೆ ಎಂದು ಗೊತ್ತಾಯಿತು. ಪ್ರಾಸಾ 1 ಹಾಗೂ ಆರೋಪಿಯ ನಡುವೆ ಗಲಾಟೆಯಾಗಿದ್ದರಿಂದ ಆರೋಪಿ ಠಾಣೆಯಲ್ಲಿದ್ದಾನೆ ಎಂದು ಗೊತ್ತಾಯಿತು. ಗಲಾಟೆಯ ವಿವರಗಳು ಹಾಗೂ ಯಾವ ವಿಷಯಕ್ಕೆ ಗಲಾಟೆಯಾಯಿತು ಎಂದು ನನಗೆ ಗೊತ್ತಿಲ್ಲ. ಆ ಬಗ್ಗೆ ನಾನು ಪೊಲೀಸರ ಮುಂದೆ ಹೇಳಿಕೆ ಕೊಟ್ಟಿಲ್ಲ.

**(ಈ ಹಂತದಲ್ಲಿ ಮಾನ್ಯ ಸರ್ಕಾರಿ ಅಭಿಯೋಜಕರ ವಿನಂತಿಯ ಮೇರೆಗೆ ಸಾಕ್ಷಿಯನ್ನು ಪ್ರತಿಕೂಲ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ**

**ನೀಡಲಾಯಿತು)**

**<u>ಪಾಟೀ ಸವಾಲುಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ</u>**

3. ನನ್ನ ಹಾಗೂ ಪ್ರಾಸಾ 1 ರವರ ಮಧ್ಯ ಹಣಕಾಸಿನ ವ್ಯವಾಹಾರ ಸುಮಾರು ವರ್ಷಗಳಿಂದ ಇದ್ದುದರಿಂದ ನಾನು ಮೇಲಿಂದ ಮೇಲೆ ಪ್ರಾಸಾ 1 ರವರೊಂದಿಗೆ ಮಾತನಾಡುತ್ತಿದ್ದೆ ಎಂದರೆ ಸರಿಯಲ್ಲ. ಆ ಬಗ್ಗೆ ಆರೋಪಿ ನನ್ನನ್ನು ವಿಚಾರಿಸಿದಾಗ ಹಣಕಾಸಿನ ವ್ಯವಹಾರದ ಬಗ್ಗೆ ನಾನು ಫೋನ್ ನಲ್ಲಿ ಮಾತನಾಡುತ್ತೇನೆ ಎಂದು ತಿಳಿಸಿದ್ದೆ ಎಂದರೆ ಸರಿಯಲ್ಲ. ದಿಃ 15.06.2020 ರಂದು ಆರೋಪಿ kA–09–ER –1907 ಸ್ಟೇಂಡರ್ ಪ್ಲಸ್ ಮೊಟರ್ ಬೈಕ್ ನಲ್ಲಿ ಹೋದವನು ಆ ದಿನ ತಡವಾಗಿ ರಾತ್ರಿ ಮನೆಗೆ ಬಂದ ಎಂದರೆ ಸರಿಯಲ್ಲ. ಮು. ಮಾ. 2 ಆರೋಪಿಯ ಸ್ವೆಟರ್ ಆಗಿದೆ. ಅದನ್ನು ಆರೋಪಿ ದಿಃ 15.06.2020 ರಂದು ಧರಿಸಿಕೊಂಡು ಹೋಗಿದ್ದ ಎಂದರೆ ದಿಃ 18.06.2020 ರಂದು ಕೆಲಸಕ್ಕೆ ಹೋಗುವಾಗ ಧರಿಸಿಕೊಂಡು ಹೋಗಿದ್ದ. ದಿಃ 15.06.2020 ರಂದು ಆರೋಪಿ ತಡವಾಗಿ ಮನೆಗೆ ಮರಳಿದಾಗ ನಾನು ಮು. ಮಾ. 2 ಸ್ವೆಟರ್ ಬಗ್ಗೆ ವಿಚಾರಿಸಿದ್ದೆ ಆರೋಪಿ ಉತ್ತರಿಸಲಿಲ್ಲ ಎಂದರೆ ಸರಿಯಲ್ಲ. ಈಗ ನನಗೆ ತೋರಿಸಿದ 2 ಪೋಟೋದಲ್ಲಿ ಕಾಣುವ ಬೈಕ್ ನಮ್ಮದೇ ಆಗಿದ್ದು 2 ಪೋಟೋಗಳನ್ನು ನಿಪಿ. 16 ಮತ್ತು 17 ಎಂದು ಗುರುತಿಸಲಾಯಿತು.

4. ದಿಃ19.06.2020 ರಂದು ಪೊಲೀಸರು ನಮ್ಮ ಮನೆಗೆ ಬಂದು ಆರೋಪಿಯನ್ನು ವಶಕ್ಕೆ ಪಡೆದುಕೊಂಡು ಹೋದರು ಆ ಸಮಯದಲ್ಲಿ ವಿಚಾರಿಸಿದಾಗ ನನಗೆ ದಿಃ **15.06.2020** ರಂದು ಮಧ್ಯಾಹ್ನ **1.30** ಗಂಟೆ ಸಮಯದಲ್ಲಿ ಆರೋಪಿಯು ಪ್ರಾಸಾ **1**

ರವರ ಬಳಿ ಹೋಗಿ ಹಣಕಾಸಿನ ವ್ಯವಹಾರಕ್ಕೆ ಸಂಬಂಧಿಸಿದಂತೆ ಅಕ್ರಮ ಸಂಬಂಧ ಹೊಂದಿದ್ದೀಯಾ ಎಂದು ಫೋನ್ ನಲ್ಲಿ ಮಾತನಾಡುತ್ತೀಯಾ ಎಂದು ಕೊಲೆ ಮಾಡುತ್ತೇನೆ ಎಂದು ಮಚ್ಚಿನಿಂದ ಹೊಡೆದು ಪ್ರಾಸಾ 1 ರವರಿಗೆ ಕಿವಿ , ತಲೆ ಮತ್ತು ಕೈಗೆ ಮಾರಣಾಂತಿಕ ಹಲ್ಲೆ ಮಾಡಿದ್ದಾನೆ ಎಂದು ಗೊತ್ತಾಯಿತು ಎಂದರೆ ಪ್ರಕರಣ ದಾಖಲಾದ ನಂತರ ಗೊತ್ತಾಯಿತು. ಈಗ ನನಗೆ ಓದಿ ಹೇಳಿದಂತೆ ನಿಪಿ. 18 ರ ಪ್ರಕಾರ ಹೇಳಿಕೆ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಆರೋಪಿ ನನ್ನ ಗಂಡನಾದ್ದರಿಂದ ಅವನಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿ ಪರಃ ಇಲ್ಲ**

ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ ಹೇ ಕೇ ಸ ಇ ಎ ಒ.,

30.01.2024
(ಪ್ರಭಾವತಿ ಎಮ್ ಹಿರೇಮಠ)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಮೈಸೂರು.